ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

**ಸಿ.ಸಿ. ಸಂಖ್ಯೆ. 10/2025**

| | | |
|---|---|---|
| ಸಾಕ್ಷಿದಾರರ ಹೆಸರು | ಕೆ.ಸಿ. ಕಿರಣ್ | ಸಿ.ಡಬ್ಲ್ಯೂ: 2 ಪಿ.ಡಬ್ಲ್ಯೂ: 2 |
| ತಂದೆಯ ಹೆಸರು | ಕೆ.ಬಿ. ಚಂದ್ರು | |
| ವಯಸ್ಸು | 35 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಕಣಚೂರು ಗ್ರಾಮ, ಮೂಡಿಗೆರೆ ತಾ: | |

ದಿನಾಂಕ: 05.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಚಾಸಾ.1, 3 ರಿಂದ 5 ರವರ ಪರಿಚಯ ನನಗೆ ಇದೆ. ದಿ: 08.10.2024 ರಂದು ಮಂಗಳವಾರ ದುರ್ಗಾ ದೇವಸ್ಥಾನದ ಪೂಜೆಗೆ ಪಾಲ್ಗೊಂಡಿರುತ್ತೇವೆ. 100 ರಿಂದ 150 ಜನ ಸೇರಿರುತ್ತೇವೆ. ರಾತ್ರಿ 8.15 ರ ಸುಮಾರಿಗೆ ಊಟ ಮುಗಿಸಿಕೊಂಡು ರೋಡಲ್ಲಿ ಹೋಗುವಾಗ, ನಾನು, ಚಾಸಾ.3 ರಿಂದ 5 ರವರು ಉಮೇಶ್ ರವರ ಮನೆಯ ಮುಂದೆ ಚಾಸಾ.3 ಪ್ರದೀಪ್ ರವರು ಬೈಕನ್ನು ನಿಲ್ಲಿಸಿದ್ದರು. ನಾವು ಹೋಗುತ್ತಿರುವಾಗ ಆರೋಪಿ ಮುಂದೆ ಹೋಗುತ್ತಿದ್ದರು. ಕಲ್ಲನ್ನು ಎತ್ತಿ ಚಾಸಾ.1 ರವರ ಕಾರಿಗೆ ಆರೋಪಿ ಹೊಡೆದರು. ಜೋರಾಗಿ ಶಬ್ದ ಕೇಳಿಸಿತು. ಶಬ್ದ ಕೇಳಿ ನಾವು ಸುಮ್ಮನೆ ಇದ್ದೆವು, ನಂತರ ರಾತ್ರಿ 8.30 ರ ಸುಮಾರಿಗೆ ಚಾಸಾ.1 ರವರು ಬಂದಾಗ ಕಾರಿನ ಗಾಜು ಹೊಡೆದಿತ್ತು.

2. ಕಾರಿನ ಗಾಜನ್ನು ಆರೋಪಿ ಹೊಡೆದು ಹಾಕಿದ ವಿಚಾರವನ್ನು ಚಾಸಾ.1 ರವರಿಗೆ ನಾವು ತಿಳಿಸಿದೆವು. ನಂತರ ಚಾಸಾ.1 ರವರು ಪೊಲೀಸರಿಗೆ ಘಟನೆಯ ವಿಚಾರವನ್ನು ಕರೆ ಮಾಡಿ ತಿಳಿಸಿದರು. ಕಾರಿನಲ್ಲಿ ಬಿದಿದ್ದ ಕಲ್ಲನ್ನು ಚಾಸಾ.1 ರವರು ತೆಗೆದು ಸೀಬೆ ಗಿಡದ ಕೆಳಗೆ ಇಟ್ಟರು. ಆ ಸಮಯದಲ್ಲಿ ಎಲ್ಲರನ್ನು ನಿಲ್ಲಿಸಿ

ಛಾಯಚಿತ್ರವನ್ನು ತೆಗೆದರು. ಮರುದಿನ ಬೆಳಿಗ್ಗೆ ಗೋಣಿಬೀಡು ಪೊಲೀಸ್ ಠಾಣೆಗೆ ದೂರನ್ನು ನೀಡಲಾಯಿತು. ಮಾರುತಿ 800 ಕಾರು ಆಗಿತ್ತು, ಅದರ ಸಂಖ್ಯೆ ಕೆ.ಎ.05/ಎಂ.ಎ.3929 ಆಗಿತ್ತು. ಈಗ ನಾನು ನೋಡುತ್ತಿರುವ ನಿ.ಪಿ.4 ಛಾಯಚಿತ್ರದಲ್ಲಿ ಇರುವ ಕಾರಿನ ಗಾಜನ್ನೇ ಆ ದಿನ ಹೊಡೆಯಲಾಗಿತ್ತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಹೊಡೆದು ಹೋದ ಕಾರಿನ ಗಾಜು ಮತ್ತು ಕಲ್ಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು ಸ.ಸ.ಅ. ರವರಿಂದ</u>**

3. ಚಾಸಾ.1 ರವರ ಕಾರಿನ ಗಾಜು ಹೊಡೆದು ಹಾಕಿದ್ದರಿಂದ ಅವರಿಗೆ ಸುಮಾರು 4750-00 ನಷ್ಟ ಉಂಟಾಗಿತ್ತು ಎಂದರೆ ಸರಿ.

<u>ಪಾಟೀ ಸವಾಲು ಶ್ರೀಮತಿ ಬಿ.ಜಿ.ಎನ್ ವಕೀಲರಿಂದ – ಆರೋಪಿತನ ಪರವಾಗಿ</u>

4. ಚಾಸಾ.1 ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.1 ರವರು ಒಂದೇ ಜನಾಂಗಗಕ್ಕೆ ಸೇರಿದವರು ಎಂದರೆ ಸರಿಯಲ್ಲ. ನಾನು ಎಸ್.ಎಸ್.ಎಲ್.ಸಿ ವರೆಗೆ ಕಲಿತಿದ್ದೇನೆ. ನಾನು ಮತ್ತು ಚಾಸಾ.1 ರವರು ಒಂದೇ ಊರಿನವರು ಎಂದರೆ ಸರಿ. ನಾನು, ಚಾಸಾ.1 ಮತ್ತು ಚಾಸಾ.3 ರಿಂದ 5 ರವರು ಸ್ನೇಹಿತರು ಎಂದರೆ ಸಾಕ್ಷಿ ಸ್ನೇಹಿತರಲ್ಲ, ಒಂದೇ ಊರಿನವರು ಎಂದು ನುಡಿಯುತ್ತಾರೆ. ನಾವುಗಳೆಲ್ಲರು ಒಂದೇ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

5. ನವರಾತ್ರಿ ಪೂಜೆಗೆ ನಾನು ಪ್ರತಿ ದಿನ ಭಾಗವಹಿಸುತ್ತಿದ್ದೆ. ನಮ್ಮ ಮನೆಯಿಂದ ದುರ್ಗಾದೇವಿ ದೇವಸ್ಥಾನ 1 ಕಿಮೀ ದೂರ ಇರುತ್ತದೆ. ನಾನು ಪ್ರತಿ ದಿನ ವಾಹನದಲ್ಲಿ ಓಡಾಡುತ್ತಿದ್ದೆ ಎಂದರೆ ಸರಿ. ನಾನು ಬಳಸುತ್ತಿದ್ದ ವಾಹನವನ್ನು ದೇವಾಸ್ಥಾನದ ಆವರಣದಲ್ಲಿ ನಿಲ್ಲಿಸುತ್ತಿದ್ದೆ ಎಂದರೆ ಸಾಕ್ಷಿ ಸ್ವಲ್ಪ ದೂರದಲ್ಲಿ ನಿಲ್ಲಿಸುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಆ ದಿನ ದೇವಸ್ಥಾನಕ್ಕೆ

ನಡೆದುಕೊಂಡು ಬಂದಿದ್ದೆ. ನಾನು ದೇವಸ್ಥಾನಕ್ಕೆ ಬಂದಾಗ ಸಂಜೆ 7 ಗಂಟೆಯಾಗಿತ್ತು. ನಾನು ದೇವಸ್ಥಾನದ ಒಳಗೆ ಆರೋಪಿಯನ್ನು ನೋಡಿರಲಿಲ್ಲ. ದೇವಸ್ಥಾನದಲ್ಲಿ ಪೂಜೆ ಮುಗಿದಾಗ 8.10 ರ ಸಮಯ ಆಗಿತ್ತು. ಮನೆಗೆ ವಾಪಸ್ಸು ಹೋಗಲು ನನಗೆ ವಾಹನದ ವ್ಯವಸ್ಥೆ ಇರಲಿಲ್ಲ. ಆರೋಪಿ ನನಗೆ ಮೊದಲಿನಿಂದಲು ಪರಿಚಯ ಎಂದರೆ ಸರಿ. ಆರೋಪಿಯನ್ನು ನಾನು 8.15 ರ ಸುಮಾರಿಗೆ ನೋಡಿದ್ದೆ. ನಾನು ದೇವಸ್ಥಾನದಿಂದ ಬಂದಾಗ ನಮ್ಮ ಮುಂದೆ ಆರೋಪಿ ಹೋಗುತ್ತಿದ್ದ. ಕಾರಿನ ಗಾಜು ಹೊಡೆದ ಶಬ್ದ ಬಂದಾಗ 8.15 ರ ಸಮಯ ಆಗಿತ್ತು. 8.15 ರ ಸುಮಾರಿಗೆ ಕಾರಿನ ಬಳಿ ಆರೋಪಿ ಒಬ್ಬರೇ ಇದ್ದರು. ಆರೋಪಿಯ ಕೈಯಲ್ಲಿ ಯಾವುದೇ ವಸ್ತು ಇರಲಿಲ್ಲ. ಕಾರಿನ ಮೇಲೆ ಕಲ್ಲು ಬಿದಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಕಾರಿನ ಸಂಖ್ಯೆ ಮತ್ತು ಬಣ್ಣವನ್ನು ಹೇಳಿದ್ದೇನೆ. ಕಾರಿನ ಬಣ್ಣ ಬಿಳಿ ಎಂದು ಹೇಳಿದ್ದೇನೆ. ಕಾರಿನ ಮೇಲೆ ಇದ್ದ ಕಲ್ಲನ್ನು ನಾನು ನ್ಯಾಯಾಲಯದಲ್ಲಿ ಗುರುತಿಸಬಲ್ಲೆ. ಶಬ್ದ ಬಂದ ತಕ್ಷಣ ನಾನು ಚಾಸಾ.1 ರವರಿಗೆ ತಿಳಿಸಲಿಲ್ಲ. ಚಾಸಾ.1 ರವರಿಗೆ ಆ ಸಮಯದಲ್ಲಿಯೇ ಆ ವಿಚಾರವನ್ನು ತಿಳಿಸಲು ನನಗೆ ತೊಂದರೆ ಇರಲಿಲ್ಲ. ಕಾರಿನ ಮುಂಭಾಗದ ಗಾಜು ಹೊಡೆದಿದೆ ಎಂದು ಹೇಳಿಕೆ ನೀಡಿದ್ದೇನೆ. ಕಾರಿನ ಮುಂಭಾಗದ ಎಡಭಾಗ ಅಥ ಬಲಭಾಗದ ಕಾರಿನ ಗಾಜು ಹೊಡೆದಿದೆ ಎಂದು ತಾವು ಹೇಳಿಕೆ ನೀಡಿದ್ದೀರಿ ಎಂದರೆ ಸಾಕ್ಷಿ ಮುಭಾಗದ ಗಾಜು ಹೊಡೆದಿದೆ ಎಂದು ಹೇಳಿಕೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ನೋಡಿದಾಗ ಕಾರಿನ ಮೇಲೆ ಕಲ್ಲು ಇತ್ತು. ಘಟನೆ ನಡೆದು 15 ನಿಮಿಷಗಳ ಬಳಿಕ ನಾನು ಚಾಸಾ.1 ರವರಿಗೆ ಆ ವಿಚಾರವನ್ನು ತಿಳಿಸಿದ್ದೇನೆ.

6. ಚಾಸಾ.1 ರವರು ಸ್ಥಳಕ್ಕೆ ಬಂದ ಬಳಿಕ ವಿಚಾರವನ್ನು ತಿಳಿಸಿದ್ದೇನೆ. ಆರೋಪಿಯನ್ನು ಆ ಸಮಯದಲ್ಲಿ ನಾನು ಮಾತನಾಡಿಸಲು ಪ್ರಯತ್ನಿಸಲಿಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ವೈಶಮ್ಯ ಇರುವುದಿಲ್ಲ. ಆ ಸಮಯದಲ್ಲಿ ಆರೋಪಿಯನ್ನು ಮಾತನಾಡಿಸಲು ನನಗೆ ತೊಂದರೆ ಇರಲಿಲ್ಲ

ಎಂದರೆ ಸಾಕ್ಷಿ ಸಮಸ್ಯೆ ಆಗುತ್ತದೆ ಎಂದು ನಾನು ಮಾತನಾಡಿಸಲಿಲ್ಲ ಎಂದು ನುಡಿಯುತ್ತಾರೆ. ಚಾಸಾ.1 ರವರು ವಿಚಾರವನ್ನು ತಿಳಿಸಿದ ನಂತರ ಪೊಲೀಸರಿಗೆ ಕರೆ ಮಾಡಿ ತಿಳಿಸಿದರು, ದೂರು ನೀಡಲಿಲ್ಲ. ಪೊಲೀಸರು ಆ ಸಮಯದಲ್ಲಿ ಸ್ಥಳಕ್ಕೆ ಬರಲಿಲ್ಲ, ದಿಃ 15 ರಂದು ಸ್ಥಳಕ್ಕೆ ಬಂದಿದ್ದರು. ಛಾಯಚಿತ್ರವನ್ನು ಆ ಸಮಯದಲ್ಲಿ ಯಾರು ತೆಗೆದಿದ್ದರು ಎಂದು ಹೇಳಲು ಆಗುವುದಿಲ್ಲ. ನಿ.ಪಿ.4 ಛಾಯಚಿತ್ರದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿ. ಆ ದಿನ ವಿಪರೀತ ಮಳೆ ಗಾಳಿ ಇತ್ತು ಎಂದರೆ ಸುಳ್ಳು.

7. ಚಾಸಾ.1 ಮತ್ತು ಆರೋಪಿಯ ನಡುವೆ ಗಣೇಶ ಹಬ್ಬದ ಸಮಯದಲ್ಲಿ ಗಲಾಟೆಯಾಗಿತ್ತು ಎಂದರೆ ಸಾಕ್ಷಿ ಚಾಸಾ.1 ರವರು ಇಲ್ಲಿ ಗಲಾಟೆ ಮಾಡಬಾರದು ಎಂದು ಆರೋಪಿಗೆ ಹೇಳಿ ಕಳುಹಿಸಿರಬಹುದು. ನಿ.ಪಿ.4 ಛಾಯಚಿತ್ರದಲ್ಲಿ ಕಾರಿನ ಗಾಜಿನ ಮೇಲೆ ಯಾವುದೇ ಕಲ್ಲು ಕಂಡು ಬರುವುದಿಲ್ಲ ಎಂದರೆ ಸರಿ. ಚಾಸಾ.1 ರವರು ಆ ಕಲ್ಲನ್ನು ಆ ದಿನ ನೋಡಿದ್ದರು. ನಾನು ಆ ದಿನ ಆರೋಪಿ ಕಲ್ಲನ್ನು ಕಾರಿನ ಗಾಜಿನ ಮೇಲೆ ಹಾಕುವುದನ್ನು ನೋಡಿದ್ದರೆ ತಕ್ಷಣ ಆ ವಿಚಾರವನ್ನು ಚಾಸಾ.1 ರವರಿಗೆ ತಿಳಿಸುತ್ತಿದ್ದೆ, ಆರೋಪಿ ಆ ರೀತಿಯ ಯಾವುದೇ ಕಲ್ಲನ್ನು  ಹಾಕ್ಕಿದರನ್ನು ನೋಡದ ಕಾರಣ ಚಾಸಾ.1 ರವರಿಗೆ ತಿಳಿಸಲಿಲ್ಲ ಎಂದರೆ ಸರಿಯಲ್ಲ. ಮು.ಮಾ.2 ಕಲ್ಲು ಆ ದಿನ ಆರೋಪಿ ಹಾಕಿದ್ದ ಎಂದು ಹೇಳುವ ಕಲ್ಲು ಅಲ್ಲ ಎಂದರೆ ಸಾಕ್ಷಿ ಅದೇ ತರಹದ ಕಾಡು ಕಲ್ಲು ಎಂದು ನುಡಿಯುತ್ತಾರೆ. ನಾನು ಆ ದಿನ ಕಾರಿನ ಗಾಜಿನ ಮೇಲೆ ಇದ್ದ ಕಲ್ಲನ್ನು ತೆಗೆಯಲು ಪ್ರಯತ್ನಿಸಲಿಲ್ಲ. ಚಾಸಾ.1 ರವರ ಬಳಿ ದ್ವಿಚಕ್ರ ವಾಹನ ಇರುತ್ತದೆ. ಕಾರಿನ ಗಾಜನ್ನು ಹೊರತುಪಡಿಸಿ ಬೇರೆ ಏನು ಹೊಡೆದು ಹೋಗಿರಲಿಲ್ಲ.

8. ಚಾಸಾ.1 ರವರಿಗೆ ದೂರನ್ನು ಅದೇ ದಿನ ನೀಡುವಂತೆ ನೀವು ತಿಳಿಸಿದ್ದೀರಾ ಎಂದರೆ ಸಾಕ್ಷಿ ಚಾಸಾ.1 ರವರು ಕರೆ ಮಾಡಿ ಪೊಲೀಸರಿಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಚಾಸಾ.1 ರವರ ಮೇಲೆ ಈ ನ್ಯಾಯಾಲಯದಲ್ಲಿ ಕೆಲವು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿಲ್ಲ, ನ್ಯಾಯಾಲಯದ ಮುಂದಿರುವ ಮುದ್ದೆ

ಮಾಲಿಗೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಉದ್ದೇಶ ಪೂರಕವಾಗಿ ಆರೋಪಿ ಮೇಲೆ ಸುಳ್ಳು ಆರೋಪವನ್ನು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದರೆ ಛಾಯಚಿತ್ರವನ್ನು ಯಾರು ತೆಗೆದರು ಎಂದು ಹೇಳುತ್ತಿದ್ದೆ, ನಾನು ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ.

9. ನಮ್ಮ ದೇವಾಲಯದಲ್ಲಿ ವರ್ಷ ಪೂರ್ತಿ ಪೂಜೆ ಆಗುತ್ತದೆ ಎಂದರೆ ಸರಿ. ನವರಾತ್ರಿ ಉತ್ಸವದಲ್ಲಿ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿ. ದೇವಾಲಯದಲ್ಲಿ ಹೀಡುಗಾಯಿ ಹಾಕುವ ಪದ್ಧತಿ ಇದೆ ಎಂದರೆ ಸಾಕ್ಷಿ ದೇವಸ್ಥಾನದ ಒಳಗೆ ಇರುತ್ತದೆ, ಹೊರಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ಪೂಜೆಗೆ ಸುಮಾರು 150 ರಿಂದ 200 ಜನ ಸೇರಿದ್ದರು. ಚಾಸಾ.1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ